# 18-10-2025

# HIV AIDS PREVENTION AWARENESS PROGRAMME

Vidyavardhaka Sangha ®

**Vidyavardhaka First Grade College**

**Sheshadri Iyer Road, Mysuru**

IQAC,NSS, NCC, Scouts & Guides, Youth Red Cross and Nature Club Wing Jointly Organizing



## 'HIV AIDS PREVENTION AWARENESS PROGRAMME''

| President | Resource person | Presence |
|---|---|---|
| Dr.S.MariGowda<br>Principal | Mr. Lokesh<br>Medical Counsellore,<br>K.R.Hospital, Mysuru | Prof.Lavanya S<br>Staff Advisor |

Venue : Lecture Hall # 111 | Date : 18-10-2025 | Time 10.30 AM

All are Cordially Invited



# ರೋಗ ತಡೆಗೆ ಜಾಗರೂಕತೆ ಮುಖ್ಯ

ಒಂದು ದೇಶ ಸುಸ್ಥಿರವಾಗಿ ಅಭಿವೃದ್ಧಿಯಾಗಬೇಕಾದರೆ ಯುವಜನತೆಯ ಪಾತ್ರ ಬಹಳ ಮುಖ್ಯವಾದುದು. ಆದರೆ ಇಂತಹ ಯುವಜನತೆಯೇ ದುಶ್ಚಟಗಳಿಗೆ ದಾಸರಾದರೆ ಆ ದೇಶ ಅವನತಿಯನ್ನು ಹೊಂದುತ್ತದೆ ಎಂದು ಕೆ.ಆರ್.ಆಸ್ಪತ್ರೆಯ ವೈದ್ಯಕೀಯ ವಿಭಾಗದ ಆಪ್ತ ಸಮಾಲೋಚಕ ಲೋಕೇಶ್ ಅಭಿಪ್ರಾಯಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ, ರಾ.ಸೇ.ಯೋ, ಎನ್.ಸಿ.ಸಿ, ಸ್ಕೌಟ್ಸ್ ಅಂಡ್ ಗೈಡ್ಸ್, ಭಾರತೀಯ ರೆಡ್ ಕ್ರಾಸ್ ಹಾಗೂ ನೇಚರ್‌ಕ್ಲಬ್ ಘಟಕಗಳು ಇಂದು ಜಂಟಿಯಾಗಿ ಆಯೋಜಿಸಿದ್ದ ಏಡ್ಸ್ ತಡೆಗಟ್ಟುವಿಕೆ ಅರಿವಿನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಜಗತ್ತಿನಾದ್ಯಂತ ಹಲವು ಕಾಯಿಲೆಗಳಿದ್ದು ಅವುಗಳಲ್ಲಿ ಏಡ್ಸ್ ಅತ್ಯಂತ ಮಾರಣಾಂತಿಕ ಕಾಯಿಲೆಯಾಗಿದೆ. ಇಂತಹ ಏಡ್ಸ್‌ನ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಸಲುವಾಗಿ ವಿಶ್ವಸಂಸ್ಥೆಯ ಸೂಚನೆಯ ಮೇರೆಗೆ ಶಿಕ್ಷಣ ಇಲಾಖೆ ಈ ಅರಿವಿನ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಏರ್ಪಡಿಸಿದೆ. ಕೊರೋನಾಗಿಂತ ಮೊದಲು ಎಲ್ಲರೂ ಏಡ್ಸ್ ಕಾಯಿಲೆಗೆ ಹೆದರುತ್ತಿದ್ದರು. ಕೊರೊನಾ ನಂತರ ಹಲವು ಅರಿವು ಕಾರ್ಯಕ್ರಮಗಳಿಂದಾಗಿ ಇಂದು ಏಡ್ಸ್‌ನ ಹರಡುವಿಕೆ ಬಹಳಷ್ಟು ಕಡಿಮೆಯಾಗಿದೆ. ಏಡ್ಸ್ ಮಾನವರಿಗೆ ಹಲವು ವಿಧಾನ'ಗಳ ಮೂಲಕ ಹರಡುತ್ತದೆ. ರೋಗಪೀಡಿತರಾದ ಮಾನವರ ಪ್ರತಿರೋಧಕ ಶಕ್ತಿ ಕಡಿಮೆಯಾಗುತ್ತದೆ. ಅದರಲ್ಲಿಯೂ ಅಪ್ರಾಪ್ತ ವಯಸ್ಕರೂ ಹಲವು ರೀತಿಯಲ್ಲಿ ದುಶ್ಚಟಗಳಿಗೆ ದಾಸರಾಗಿ ಈ ಕಾಯಿಲೆಗೆ ತುತ್ತಾಗುತ್ತಿರುವುದು ವಿಷಾದನೀಯ. ವಿದ್ಯಾರ್ಥಿ ದೆಸೆಯಲ್ಲಿಯೇ ಯುವಜನರು ಸರಿಯಾದ ನಿರ್ಧಾರ ತೆಗೆದುಕೊಂಡು ಹಲವು ದೊಡ್ಡವ್ಯಕ್ತಿಗಳ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಉತ್ತಮ ಸಾಧನೆ ಮಾಡಬೇಕೆಂದು ತಿಳಿಸಿದರು.

ಏಡ್ಸ್‌ನ ಪ್ರಕರಣ ಮೊದಲ ಬಾರಿಗೆ ಅಮೆರಿಕಾ ದೇಶದಲ್ಲಿ ಕಂಡುಬಂದರೆ, ತಮಿಳುನಾಡಿನ ಚೆನ್ನೈನ ವೆಲ್ಲೂರಿನಲ್ಲಿ 1986ರಲ್ಲಿ ಭಾರತದ ಮೊದಲ ಪ್ರಕರಣ ಪತ್ತೆಯಾಯಿತು. ಕರ್ನಾಟಕದ ಬಾಗಲಕೋಟೆಯಲ್ಲಿ 1987ರಲ್ಲಿ ಏಡ್ಸ್‌ನ ಮೊದಲ ಪ್ರಕರಣ ದಾಖಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ ಮಾತನಾಡುತ್ತಾ ನಮ್ಮನ್ನು ನಾವು ಅರಿತುಕೊಂಡರೆ ಯಾವ ರೋಗವು ನಮ್ಮನ್ನು ಕಾಡುವುದಿಲ್ಲ, ಏಡ್ಸ್‌ನಂತಹ ಮಾರಕ ಕಾಯಿಲೆಗಳಿಗೆ ಅರಿವಿನ ಕೊರತೆಯೇ ಪ್ರಮುಖ ಕಾರಣವಾಗಿದ್ದು, ಅದರ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆಯಿಂದ ಯೋಚಿಸಿ ಕಾರ್ಯಪ್ರವತ್ತರಾಗಲು ಇಂತಹ ಕಾರ್ಯಕ್ರಮಗಳು ತುಂಬಾ ಉಪಯುಕ್ತವೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕ ಸಲಹೆಗಾರ ಪ್ರೊ.ಲಾವಣ್ಯ.ಎಸ್, ಎಲ್ಲಾ ಘಟಕಗಳ ಸಂಚಾಲಕರು, ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಪ್ರೊ.ಚಂದನ್ ನಿರೂಪಿಸಿ ವಂದಿಸಿದರು.


Venue : Lecture Hall # 111 | Date : 18-10-2025 | Time 10.30 AM
National AIDS Control Organisation
India's Voice against AIDS
Ministry of Health & Family Welfare, Government of India
www.naco.gov.in
KSAPS
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಬೆಂಗಳೂರು
ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಮೈಸೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು
ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಮೈಸೂರು
ಚರ್ಮ ಮತ್ತು ಲೈಂಗಿಕ ರೋಗ ವಿಭಾಗ, ಕೆ.ಆರ್. ಆಸ್ಪತ್ರೆ, ಮೈಸೂರು
ಇವರ ಸಂಯುಕ್ತಾಶ್ರಯದಲ್ಲಿ
ಹೆಚ್.ಐ.ವಿ. / ಏಡ್ಸ್ ಕುರಿತು ಅರಿವು ಮಾಸಾಚರಣೆ : 2025 ಪ್ರಯುಕ್ತ
ಹಳ್ಳಿ ಮಟ್ಟದಲ್ಲಿ ಹೆಚ್.ಐ.ವಿ. / ಏಡ್ಸ್ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ
















gp120
gp41
Matrix Protein
p17
Core Proteins
p24
RT
Integrase
KSAPS


Envelope
gp120
gp41
Matrix Protein
p17
Core Proteins
p24
RT
Integrase
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್
ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ
ಚರ್ಮ ಮತ್ತು ಲೈಂಗಿಕ ರೋಗ ವಿಭಾಗ,

